ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ. ದ. ನ್ಯಾ. ದಂ.ಗಳ ನ್ಯಾಯಾಲಯ, ಚಿಕ್ಕೋಡಿ.

OS:56/2022

Pw: 1

ಸಾಕ್ಷಿಯನ್ನು ದಿನಾಂಕ 20-02-2026 ರಂದು ಪ್ರಮಾಣೀಕರಿಸಲಾಯಿತು.

ಪಾಟೀಸವಾಲು- ಪ್ರತಿವಾದಿ 1 ಪರ ಶ್ರೀ ಆರ್ ಬಿ ಎಸ್ ವಕೀಲರಿಂದಃ

1) ಪ್ರಸ್ತುತ ಪ್ರಕರಣದಲ್ಲಿ ಪ್ರತಿವಾದಿ ದಾಖಲಿಸಿರುವ ತಕರಾರನ್ನು ನಾನು ಓದಿರುತ್ತೇನೆ. ನನಗೆ ಪ್ರಸ್ತುತ ಪ್ರಕರಣದ ವ್ಯವಹಾರದ ಬಗ್ಗೆ ವ್ಯಕ್ತಿಯ ಮಾಹಿತಿ ಇರುತ್ತದೆ, ಏಕೆಂದರೆ ನಾನು ಅಲ್ಲಿ ಆ ದಿನ ಹಾಜರಿದ್ದೆ. ನಾನು ಆ ದಿನ ಸ್ಥಳಕ್ಕೆ ಹೋಗಿರುತ್ತೇನೆ. ನಿಪಿ-2 ನ್ನು ನಾನು ಓದಿರುವುದಿಲ್ಲ. ಪಂಚನಾಮಾ ಮಾಡುವ ಕಾಲಕ್ಕೆ ನಾನು ಹಾಜರಿದ್ದೆ. ಪಂಚನಾಮಾ ಮಾಡುವ ಕಾಲಕ್ಕೆ ಕಲಗೌಡಾ ಗುಣಧರ ಪಾಟೀಲರವರು ಮಾಹಿತಿ ಕೊಟ್ಟಿರುತ್ತಾರೆ ಮತ್ತು ಜಾಗಾ ತೋರಿಸಿರುತ್ತಾರೆ. ಇಲೆಕ್ಟ್ರಿಕ್ ವಾಯರ್ ಕೆಳಗಡೆ ಬಿದ್ದಿರುವ ಫೋಟೋ ಹಾಜರ ಮಾಡಲು ತೊಂದರೆ ಇತ್ತಾ ಎಂದರೆ ತೊಂದರೆ ಇರಲಿಲ್ಲ. ಸರ್ವೆ ನಂ. 274 ರಲ್ಲಿ ಯಾವುದೇ ಕೆ ಇ ಬಿ ಇಲೆಕ್ಟ್ರಿಕ್ ವಾಯರ್ ಪಾಸ ಆಗಿ ಹೋಗಿರುವುದಿಲ್ಲ ಎಂದರೆ ಸರಿ ಅಲ್ಲ. ಸರ್ವೆ ನಂ. 274 ರ ದಕ್ಷಿಣ ದಂಡೆಯಲ್ಲಿ ಟ್ರಾನ್ಸ ಫಾರಮರ್ ಇರುತ್ತದೆ ಎಂದರೆ ಉತ್ತರ ದಂಡೆಯಲ್ಲಿ ಇರುತ್ತದೆ ಎಂದು ನುಡಿಯುತ್ತಾರೆ.

2) ನನಗೆ ಪ್ರಸ್ತುತ ಘಟನೆಯ ಬಗ್ಗೆ ಮತ್ತು ಸರ್ವೆ ನಂ. 274 ರ ವಸ್ತು ಸ್ಥಿತಿ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ ಆದರೂ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿ ಅಲ್ಲ. ಸರ್ವೆ ನಂ. 274 ರ 3 ಎಕರೆ 20 ಗುಂಟೆ ಕಬ್ಬ ಬೆಳದಿರುತ್ತೇವೆ ಎಂದು ತೋರಿಸಲು ದಾಖಲಾತಿಗಳು ಇರುವುದಿಲ್ಲ. ಊಗಾರ ಶುಗರ್ ಕಾರ್ಖಾನೆಗೆ ಸಾಗಿಸುವವರು ಇದ್ದೆವೆ. ಆ ಬಗ್ಗೆ ಕಾರ್ಖಾನಗೆ ನೊಂದ ಕೊಟ್ಟಿರಲಿಲ್ಲ. ನನ್ನ ತಂದೆ ತಾಯಿ ಹೆಸರಿನಲ್ಲಿ ಉಗಾರ ಶುಗರ್ ಕಾರ್ಖಾನೆಯಲ್ಲಿ ಶೇರಗಳು ಇರುತ್ತವೆ. ಕಬ್ಬು ಸುಟ್ಟಿದೆ ಎಂದು ಹೇಳುವ ಸಾಲದಲ್ಲಿ ಕಬ್ಬು ಬೆಳೆ ಲಾವಣಿ ಆಗಿತ್ತು. 2011 ರಲ್ಲಿ ನಾವು ಕಬ್ಬಾ ಕಳಿಸಿರುವ ರಸೀದಿಗಳು ನನ್ನ ಬಳಿ ಇರುತ್ತವೆ. 2010 ರ ಪೂರ್ವದಲ್ಲಿ ನಾವು ಎಕರೆಗೆ 60-80 ಟನ್ ಕಬ್ಬಾ ಬೆಳೆಯುತ್ತಿದ್ದೆವು. ಆ ಬಗ್ಗೆ ದಾಖಲಾತಿಗಳು ಇರುವುದಿಲ್ಲ. 2010 ರಿಂದ ಮೊದಲು ಕಬ್ಬಾ ಬೆಳೆದಿರುವ ಬಗ್ಗೆ ಅಥವಾ ಸಕ್ಕರೆ ಕಾರ್ಖಾನೆಗೆ ಕಬ್ಬನ್ನು ಸಾಗಿಸಿರುವ ಬಗ್ಗೆ ಅಥವಾ ಅದರ ಬಿಲ್ಲ ಜಮಾ ಆಗಿರುವ ಬಗ್ಗೆ ದಾಖಲಾತಿ ಇರುವುದಿಲ್ಲ. ನಾವು 3 ಎಕರೆ 20 ಗುಂಟೆ ಕಬ್ಬಾ ಬೆಳೆದಿದ್ದೆವು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿ ಅಲ್ಲ. ಅದೇ ರೀತಿ ಎಕರೆಗೆ 60-80 ಟನ್ ಕಬ್ಬು ಬೆಳೆದಿರುತ್ತೇವೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿ ಅಲ್ಲ.

3) ಪ್ರತಿವಾದಿಗಳಿಗೆ ಲೈನ್ ಸರಿ ಇಲ್ಲ ಎಂದು ನೀಡಿರುವ ಅರ್ಜಿ ಇರುತ್ತದೆ. ಅವುಗಳನ್ನು ನ್ಯಾಯಾಲಯದಲ್ಲಿ ಹಾಜರು ಪಡಿಸಲು ತೊಂದರೆ ಇಲ್ಲ. ಸದರಿ ಸರ್ವೆ ನಂಬರದಲ್ಲಿ ಕೆಇಬಿ ಲೈನ್

ಪಾಸ ಆಗಿ ಹೋಗಿಲ್ಲ ಮತ್ತು ನಾವು ಯಾವುದೇ ತಕರಾರು ಕೊಟ್ಟಿಲ್ಲ ಎಂದರೆ ಸರಿ ಅಲ್ಲ. ಸರ್ವೆ ನಂ. 274 ರಲ್ಲಿ ಯಾವತ್ತು ಲೈನ್ ಕಟ್ಟಾಗಿ ಜೊತ್ಯಾಡಿ ಬಿದ್ದಿಲ್ಲ ಎಂದರೆ ಸರಿ ಅಲ್ಲ. ದಿಃ20-02-2011 ರಂದು 4-6 ಗಂಟೆ ವರೆಗೆ ಲೋಡ ಶೆಡಿಂಗ್ ಇತ್ತು ಎಂದರೆ ಸರಿ ಅಲ್ಲ. ಆ ಸಮಯದಲ್ಲಿ ನಾಗರಮುನ್ನೋಳಿಯಲ್ಲಿ ವಿದ್ಯುತ್  ಸಪ್ಲಾಯ್ ಇರಲಿಲ್ಲ ಎಂದರೆ ಸರಿ ಅಲ್ಲ. ಪ್ರತಿವಾದಿಗಳು ವಾಯರ್ ಮತ್ತು ಟ್ರಾನ್ಸಫಾರಮರ್ ಸರಿಯಾಗಿ ಮೆನ್‌ಟೆನ ಮಾಡಿಲ್ಲ ಎಂದು ಹೇಳುವುದು ಸುಳ್ಳು ಎಂದರೆ ಸರಿ ಅಲ್ಲ. ಅದೇ ರೀತಿ ವಾಯರ ಸರಿ ಪಡಿಸಲು ಮತ್ತು ಟ್ರಾನ್ಸಫಾರಮರ್ ರಿಪೇರಿ ಮಾಡಲು ನಾವು ಕೇಳಿರುತ್ತೆವೆ ಎಂದು ಸುಳ್ಳು ಹೇಳುತ್ತಿದ್ದೆವೆ ಎಂದರೆ ಸರಿ ಅಲ್ಲ. ದಿಃ20-02-2011 ರಂದು ಪ್ರತಿ ಟನ್ ಕಬ್ಬಿಗೆ 2200/- ರೂ ಬಿಲ್ಲ ಇತ್ತು ಎಂದು ತೋರಿಸಲು ದಾಖಲಾತಿಗಳು ಇಲ್ಲ.

4) ನನ್ನ ತಂದೆ ಅವರು ಪ್ರತಿವಾದಿ ಕಛೇರಿಗೆ ಹೋಗಿದ್ದರು. ಅಲ್ಲಿ ಹೋಗಿ Executive Engineer ಮತ್ತು ಸೆಕ್ಷನ ಆಫೀಸರ್ ಗೆ ನನ್ನ ತಂದೆ ಭೇಟಿ ಆಗಿರುತ್ತಾರೆ.  ಈ ರೀತಿ ನಾನು ಸುಳ್ಳು ಹೇಳುತ್ತಿದ್ದೆನೆ ಎಂದರೆ  ಸರಿ ಅಲ್ಲ. ಕಬ್ಬು ಸುಟ್ಟಿದ್ದ ಕಾರಣ ಕಾರ್ಖಾನೆಗೆ ಕಳಿಸಿಲ್ಲ. ಸಾಮಾನ್ಯವಾಗಿ ಸುಟ್ಟಿದ ಕಬ್ಬುಗಳನ್ನು ಸಹ ಕಾರ್ಖಾನೆ ಅವರು ಅದೇ ದಿನ ತೆಗೆದುಕೊಂಡು ಹೋಗುತ್ತಾರೆ ಎಂದರೆ ಸರಿ ಅಲ್ಲ. ಆ ರೀತಿ ನಾವು ಸುಟ್ಟಿದ ಕಬ್ಬನ್ನು ಊಗಾರ ಶುಗರ್ ಕಾರ್ಖಾನೆಗೆ ಕಳುಹಿಸಿರುತ್ತೆವೆ ಎಂದರೆ ಸರಿ ಅಲ್ಲ. ಸುಟ್ಟಿದ ಕಬ್ಬಕ್ಕೆ ಅವರದೇ ರೀತಿ ಒಂದು ಬೆಲೆ ಇದ್ದು ಅದನ್ನು ಕೊಡುತ್ತಾರೆ ಎಂದರೆ ಸರಿ ಅಲ್ಲ. ಕಬ್ಬಾ ಸುಡಲು ಪ್ರತಿವಾದಿಗಳು ಹೊಣೆ ಎಂದು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೆನೆ ಎಂದರೆ  ಸರಿ ಅಲ್ಲ. ಪ್ರತಿವಾದಿಗಳ ಕಂಬಿನಿಂದ ಇಲೆಕ್ಟ್ರಿಕ್ ವಾಯರ್ ನಮ್ಮ ಹೋಲದಿಂದ ಕ್ರಾಸ್ ಆಗಿ ಹೋಲದಲ್ಲಿ ಬಿದ್ದಿದ್ದ ಕಾರಣ ಕಬ್ಬಾ ಸುಟ್ಟಿದೆ ಎಂದು  ಸುಳ್ಳು ಹೇಳುತ್ತಿದ್ದೆನೆ ಎಂದರೆ  ಸರಿ ಅಲ್ಲ. ಪ್ರತಿವಾದಿಗಳ ಮೇಲೆ ಸುಳ್ಳು ದೂರನ್ನು ಪೊಲೀಸ್ ಠಾಣೆಯಲ್ಲಿ ನೀಡಿರುತ್ತೆನೆ ಎಂದರೆ ಸರಿ ಅಲ್ಲ.

5) ಜಿಲ್ಲಾ ಇಲೆಕ್ಟ್ರಿಕಲ್ ಇನ್ಸಪೆಕ್ಟರಗೆ ಈ ಬಗ್ಗೆ ತಿಳಿಸಿರುವುದಿಲ್ಲ. ಪ್ರತಿವಾದಿಗಳಿಗೆ ಕಬ್ಬಾ ಸುಟ್ಟಿದೆ ಎಂದು ನಾವು ತಿಳಿಸಿರುತ್ತೆವೆ ನಂತರ ಅವರು TC ವರ್ಗಾಯಿಸಿರುತ್ತಾರೆ. ಆ ಬಗ್ಗೆ ದಾಖಲಾತಿ ಇದೆಯಾ ಎಂದರೆ ಗೋತ್ತಿಲ್ಲ. ಪ್ರತಿವಾದಿಗೆ ಕಬ್ಬು ಸುಟ್ಟಿದ ಬಗ್ಗೆ ತಿಳಿಸಿರುತ್ತೆವೆ ಎಂದು  ಸುಳ್ಳು  ನುಡಿಯುತ್ತಿದ್ದೇನೆಂದರೆ ಸರಿ ಅಲ್ಲ. ಕಲಗೌಡಾ ಗುಣಧರ ಪಾಟೀಲ ಅವರ ಸರ್ವೆ ನಂ.276 ಇರುತ್ತವೆ. ಅದರ ದಾಖಲಾತಿ ಕೊಡುತ್ತೆವೆ. ಪ್ರತಿವಾದಿಗಳ ತಪ್ಪ ಇಲ್ಲದೆ ಇದ್ದರೂ ಸಹ ಅವರಿಂದ ಹಣ ತೆಗೆದುಕೊಳ್ಳಬೇಕೆಂದು ಸುಳ್ಳು ದಾವೆ ಹಾಕಿ  ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿ ಅಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

sd/-

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ.ಗಳು, ಚಿಕ್ಕೋಡಿ.